# ಕರ್ನಾಟಕ ಸರ್ಕಾರ

## ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

080 – 29753051
directorfbish@gmail.com
www.esuraksha.karnataka.gov.in

ನಿರ್ದೇಶಕರ ಕಛೇರಿ
2ನೇ ಮಹಡಿ, ಕಲ್ಯಾಣ–ಸುರಕ್ಷಾ ಭವನ,
ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–29


ಸಂ. ಇಎಸ್‌ಟಿ–1/ಇತರೆ/ಸಿಆರ್–81/2020–21

ದಿನಾಂಕ: 01.09.2020

**ಕಛೇರಿ ಜ್ಞಾಪನ**

**ವಿಷಯ:** ಕಾರ್ಖಾನೆಗಳನ್ನು ರ್‍ಯಾಂಡಂ ಸ್ಯಾಂಪ್ಲಿಂಗ್ ಆಧಾರದ ಮೇಲೆ ಪರಿವೀಕ್ಷಿಸಿ, ಪರಿವೀಕ್ಷಣಾ ವರದಿಗಳನ್ನು ಆನ್‌ಲೈನ್ ನಲ್ಲಿ ಅಪ್‌ಲೋಡ್ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 31ಕಾಬಾಸೇ 2015 ದಿ: 30.08.2016

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖೆಯು ವಿವಿಧ ಕಾರ್ಮಿಕ ಕಾನೂನುಗಳಡಿಯಲ್ಲಿ ನಡೆಸುವ ಪರಿವೀಕ್ಷಣೆಗಳಲ್ಲಿ ಏಕರೂಪತೆಯನ್ನು ತರುವ ನಿಟ್ಟಿನಲ್ಲಿ ಹಾಗೂ ಕೇಂದ್ರ ಸರ್ಕಾರದ ವ್ಯವಹಾರ ಸರಳೀಕರಣ ಯೋಜನೆಯಡಿಯಲ್ಲಿ ಕಾರ್ಖಾನೆಗಳನ್ನು ರ್‍ಯಾಂಡಂ ಸ್ಯಾಂಪ್ಲಿಂಗ್ ಆಧಾರದ ಮೇಲೆ ಪರಿವೀಕ್ಷಿಸಿ, ಪರಿವೀಕ್ಷಣಾ ವರದಿಯನ್ನು ಪರಿವೀಕ್ಷಿಸಿದ 48 ಘಂಟೆಯೊಳಗೆ ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಇಲಾಖೆಯ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. ಇಲಾಖಾ ವೆಬ್‌ಸೈಟ್‌ನಲ್ಲಿ ಪರಿವೀಕ್ಷಣಾ ವರದಿಯನ್ನು ಅಪ್‌ಲೋಡ್ ಮಾಡಲು ಮತ್ತು ಅನುಸರಣಾ ವರದಿಗಳನ್ನು ಪಡೆಯಲು ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು, 2020–21ನೇ ಸಾಲಿನ ಸಪ್ಟೆಂಬರ್ ತಿಂಗಳ ರ್‍ಯಾಂಡಂ ಸ್ಯಾಂಪ್ಲಿಂಗ್ ಕಾರ್ಖಾನೆಗಳ ಪಟ್ಟಿಯಲ್ಲು ವೆಬ್‌ಸೈಟ್‌ನಲ್ಲಿನ ಅಧಿಕಾರಿಗಳ ಲಾಗ್–ಇನ್ ನಲ್ಲಿ ಪ್ರಚುರಪಡಿಸಲಾಗಿದೆ. ಎಲ್ಲಾ ವಿಭಾಗೀಯ ಅಧಿಕಾರಿಗಳು 2020–21ನೇ ಸಾಲಿನ ಸಪ್ಟೆಂಬರ್ ಮಾಹೆಯಿಂದ ಪ್ರತೀ ತಿಂಗಳಿನಲ್ಲಿ ರ್‍ಯಾಂಡಮ್ ಸ್ಯಾಂಪ್ಲಿಂಗ್‌ನ ಕಾರ್ಖಾನೆಗಳನ್ನು ಆಯಾ ತಿಂಗಳಿನಲ್ಲಿಯೇ ಪರಿವೀಕ್ಷಣೆ ನಡೆಸಿ, ಪರಿವೀಕ್ಷಣೆ ನಡೆಸಿದ 48 ಘಂಟೆಯೊಳಗೆ ಪರಿವೀಕ್ಷಣಾ ವರದಿಯನ್ನು ಇಲಾಖೆಯ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು ಖಡ್ಡಾಯವಾಗಿರುತ್ತದೆ. ಅತೀ ಅಪಾಯಕಾರಿ ಮತ್ತು ಅಪಾಯಕಾರಿ ಕಾರ್ಖಾನೆಗಳನ್ನು ಹೊರತುಪಡಿಸಿ ಉಳಿದ ಕಾರ್ಖಾನೆಗಳನ್ನು ರ್‍ಯಾಂಡಂ ಸ್ಯಾಂಪ್ಲಿಂಗ್ ಆಧಾರದ ಮೇಲೆ ಪರಿವೀಕ್ಷಿಸುವುದು ಸಹ ಖಡ್ಡಾಯವಾಗಿರುತ್ತದೆ ಮತ್ತು ರ್‍ಯಾಂಡಂ ಸ್ಯಾಂಪ್ಲಿಂಗ್ ಪಟ್ಟಿಯನ್ನು ಹೊರತುಪಡಿಸಿ, ಸಕಾರಣವಿಲ್ಲದೆ ಯಾವುದೇ ಅಪಾಯಕಾರಿಯಲ್ಲದ ಕಾರ್ಖಾನೆಗಳನ್ನು ಪರಿವೀಕ್ಷಿಸದಿರಲು ಈ ಮೂಲಕ ಸೂಚಿಸಲಾಗಿದೆ. 2020–21ನೇ ಸಾಲಿನ ಸಪ್ಟೆಂಬರ್ ಮಾಹೆಯಿಂದ ರ್‍ಯಾಂಡಂ ಸ್ಯಾಂಪ್ಲಿಂಗ್ ಪ್ರಕಾರ ಕಾರ್ಖಾನೆಗಳನ್ನು ಪರಿವೀಕ್ಷಿಸಿ ಪರಿವೀಕ್ಷಣಾ ವರದಿಯನ್ನು ನಿಗಧಿತ ಅವಧಿಯಲ್ಲಿಯೇ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲು ಎಲ್ಲಾ ಕ್ಷೇತ್ರಾಧಿಕಾರಿಗಳಿಗೆ ಸೂಚಿಸಿದೆ. ಈ ಸಂಬಂಧ ಬಳಕೆದಾರರ ಕೈಪಿಡಿಯನ್ನು ಪ್ರತ್ಯೇಕವಾಗಿ ಪ್ರಚುರಪಡಿಸಲಾಗುವುದು.

ನಿರ್ದೇಶಕರು
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ
ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು.

ಇವರಿಗೆ:

1. ಕಾರ್ಖಾನೆ ಮತ್ತು ಬಾಯ್ಲರುಗಳ ಅಪರ ನಿರ್ದೇಶಕರು, ಬೆಂಗಳೂರು.
2. ಕಾರ್ಖಾನೆಗಳ ಜಂಟಿ ನಿರ್ದೇಶಕರು–1/ 2/ 3, ಬಳ್ಳಾರಿ.
3. ಕಾರ್ಖಾನೆಗಳ ಉಪ ನಿರ್ದೇಶಕರು, ವಿಭಾಗ–1/2/3/4/5 ಬೆಂಗಳೂರು, ವಿಭಾಗ–1 ಮೈಸೂರು, ತುಮಕೂರು ವಿಭಾಗ, ವಿಭಾಗ–1 ಮಂಗಳೂರು, ವಿಭಾಗ–1 ಬೆಳಗಾವಿ.
4. ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ವಿಭಾಗ–6/7/8/9/10 ಬೆಂಗಳೂರು, ಬಳ್ಳಾರಿ, ಕಲಬುರಗಿ, ವಿಭಾಗ–1 ಹುಬ್ಬಳ್ಳಿ,
5. ಕಾರ್ಖಾನೆಗಳ ಸಹಾಯಕ ನಿರ್ದೇಶಕರು, ವಿಭಾಗ–11/12/13/14/15/16/17/18/19/20 ಬೆಂಗಳೂರು, ವಿಭಾಗ–2 ಮೈಸೂರು, ಹಾಸನ ವಿಭಾಗ, ಶಿವಮೊಗ್ಗ ವಿಭಾಗ, ವಿಭಾಗ–2 ಮಂಗಳೂರು, ವಿಭಾಗ–2 ಹುಬ್ಬಳ್ಳಿ, ವಿಭಾಗ–2 ಬೆಳಗಾವಿ, ರಾಯಚೂರು ವಿಭಾಗ, ಕೊಪ್ಪಳ ವಿಭಾಗ, ಉಡುಪಿ ವಿಭಾಗ, ದಾವಣಗೆರೆ ವಿಭಾಗ.
6. ಕಛೇರಿ ಪ್ರತಿ.